ಪೊಲೀಸ್ ಮಹಾ ನಿರ್ದೇಶಕರು
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು
ಸೇವೆಗಳು ಹಾಗೂ ರಾಜ್ಯ ವಿಪತ್ತು ಸ್ಪಂದನಾ
ಪಡೆಯ ನಿರ್ದೇಶನಾಲಯ
ನಂ. 1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ
ಬೆಂಗಳೂರು – 560 042

ದೂರವಾಣಿ : 080 25570733
22971501
22971507
ಫ್ಯಾಕ್ಸ್ : 22942108

ಸಂಖ್ಯೆ: ಸಿಬ್ಬಂದಿ(7)18/2024 ದಿನಾಂಕ:19 .04.2024

ಇವರಿಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿಸಿಎಎಸ್)
ಒಳಾಡಳಿತ ಇಲಾಖೆ,
ವಿಧಾನಸೌಧ, ಬೆಂಗಳೂರು-01.

ಮಾನ್ಯರೆ,

ವಿಷಯ:- ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇಲಾಖೆಯಲ್ಲಿ ಖಾಲಿಯಿರುವ ವಿವಿಧ ವೃಂದದ ಒಟ್ಟು 975 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಮಂಜೂರಾತಿ ನೀಡುವಂತೆ ಕೋರುವ ಬಗ್ಗೆ.

ಉಲ್ಲೇಖ:- 1. ಕರ್ನಾಟಕ ಸರ್ಕಾರದ ಒಳಾಡಳಿತ ಇಲಾಖೆಯ ಅಧಿಸೂಚನೆ ಸಂಖ್ಯೆ: No.HD 146 SFB 2008,(part) Bangalore, Dated:10.09.2013. (ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು-2013.)
2. ಸರ್ಕಾರದ ಆದೇಶ ಸಂಖ್ಯೆ: ಒಇ 114 ಕಅಸೇ 2020, ಬೆಂಗಳೂರು, ದಿನಾಂಕ:10.06.2020..
3. ನೇಮಕಾತಿ ಅಧಿಸೂಚನೆ ಸಂಖ್ಯೆ:ಸಿಬ್ಬಂದಿ(7)47/ನೇಮಕಾತಿ/2020. ದಿನಾಂಕ:18.06.2020.

><******><

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯಲ್ಲಿ ಅಧಿಸೂಚಿಸಿರುವಂತೆ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಲ್ಲಿ ಕೆಳ ಹಂತದ ನೇರ ನೇಮಕಾತಿ ಹುದ್ದೆಗಳಿಂದ ಮೇಲ್ದರ್ಜೆ ಹುದ್ದೆಗಳಿಗೆ ನೀಡಲಾದ ಪದೋನ್ನತಿ, ವಯೋನಿವೃತ್ತಿ ಮತ್ತು ವಿವಿಧ ಕಾರಣಗಳಿಂದ ಸ್ವಯಂ ನಿವೃತ್ತಿ ಹಾಗೂ ಇನ್ನಿತರೆ ಕಾರಣಗಳಿಂದ ಮರಣ ಹೊಂದಿದ್ದರಿಂದ, ನೇರ ನೇಮಕಾತಿ ಹುದ್ದೆಗಳು ಖಾಲಿಯಿರುತ್ತವೆ. ಅಲ್ಲದೇ ರಾಜ್ಯದಲ್ಲಿ ಹೊಸದಾಗಿ ಅಗ್ನಿಶಾಮಕ ಠಾಣೆಗಳ ಪ್ರಾರಂಭಿಸಲಾಗಿದ್ದು, ಈ ಠಾಣೆಗಳಿಗೆ ಸೃಜಿಸಲಾದ ಬಹುತೇಕ ಹುದ್ದೆಗಳು ಖಾಲಿಯಿದ್ದು, ಈ ಖಾಲಿಯಿರುವ ಹುದ್ದೆಗಳಿಂದಾಗಿ ಅಗ್ನಿಶಮನ ಹಾಗೂ ರಕ್ಷಣಾ ಕಾರ್ಯಗಳಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ.

ಆದ್ದರಿಂದ ಇಲಾಖೆಯಲ್ಲಿ ಖಾಲಿಯಿರುವ ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳ ಕೊರತೆಯನ್ನು ಒಟ್ಟಾರೆಯಾಗಿ ಸರಿದೂಗಿಸಲು ನೇರ ನೇಮಕಾತಿ ಮಾಡಿಕೊಳ್ಳುವುದು ಬಹಳ ಅವಶ್ಯಕವಾಗಿದ್ದು, ಅದರಂತೆ ಇಲಾಖೆಗೆ ಮಂಜೂರಾಗಿರುವ, ಭರ್ತಿಯಾಗಿರುವ ಮತ್ತು ಖಾಲಿಯಿರುವ ನೇರ ನೇಮಕಾತಿ ಹುದ್ದೆಗಳ ವಿವರ ಕೆಳಕಂಡಂತಿದೆ.

....2

Text

| ಕ್ರ.ಸಂ | ನೇರ ನೇಮಕಾತಿ ಹುದ್ದೆಗಳ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | | | ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | | | ಖಾಲಿ ಹುದ್ದೆಗಳ ಸಂಖ್ಯೆ | | |
|---|---|---|---|---|---|---|---|---|---|---|
| | | ನೇ.ನೇ | ಮುಂಬಡ್ತಿ | ಒಟ್ಟು | ನೇ.ನೇ | ಮುಂಬಡ್ತಿ | ಒಟ್ಟು | ನೇ.ನೇ | ಮುಂಬಡ್ತಿ | ಒಟ್ಟು |
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಅಗ್ನಿಶಾಮಕ ಠಾಣಾಧಿಕಾರಿ | 137 | 91 | **228** | 70 | 71 | **141** | 67 | 20 | **87** |
| 2 | ಚಾಲಕ ತಂತ್ರಜ್ಞ | 192 | -- | **192** | 162 | -- | **162** | 30 | -- | **30** |
| 3 | ಅಗ್ನಿಶಾಮಕ ಚಾಲಕ | 1061 | 118 | **1179** | 903 | 49 | **952** | 158 | 69 | **227** |
| 4 | ಅಗ್ನಿಶಾಮಕ | 3962 | -- | **3962** | 3231 | -- | **3231** | 731 | -- | **731** |
| ಒಟ್ಟು ಹುದ್ದೆಗಳು | | **5352** | **209** | **5561** | **4366** | **120** | **4486** | **986** | **89** | **1075** |

ಸರ್ಕಾರದ ಉಲ್ಲೇಖ(2)ರ ಆದೇಶದ ಪ್ರಕಾರ 2020 ನೇ ಸಾಲಿನಲ್ಲಿ ಮೇಲಿನ 04 ವೃಂದಗಳ ಒಟ್ಟು 1567 ನೇರ ನೇಮಕಾತಿ ಹುದ್ದೆಗಳನ್ನು ಭರ್ತಿಮಾಡಲು ನೀಡಲಾದ ಮಂಜೂರಾತಿ ಅನ್ವಯ ಪೊಲೀಸ್ ನೇಮಕಾತಿಯವರ ಸಹಕಾರದೊಂದಿಗೆ ಉಲ್ಲೇಖ(3)ರ ಅಧಿಸೂಚನೆ ಹೊರಡಿಸಿ ನೇರ ನೇಮಕಾತಿ ನಡೆಸಲಾಗಿದ್ದು, ಪ್ರಸ್ತುತ ನೇರ ನೇಮಕಾತಿ ಪ್ರಕ್ರಿಯೆಗಳು ಪೂರ್ಣಗೊಂಡು 04 ವೃಂದದ ಒಟ್ಟು 1567 ಹುದ್ದೆಗಳಲ್ಲಿ 1482 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿ ಭರ್ತಿ ಮಾಡಿಕೊಳ್ಳಲಾಗಿದ್ದು, ಈ 04 ವೃಂದದ ಒಟ್ಟು 1567 ಹುದ್ದೆಗಳ ನೇರ ನೇಮಕಾತಿಯಲ್ಲಿ ಭರ್ತಿ ಮಾಡಲಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಹುದ್ದೆಗಳ ವೃಂದ | ಅಧಿಸೂಚನೆ ಹೊರಡಿಸಿದ ಹುದ್ದೆಗಳ ಸಂಖ್ಯೆ | ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ | ನೇಮಕಾತಿ ಆದೇಶ ಹೊರಡಿಸಲು ಬಾಕಿಯಿರುವ ಹುದ್ದೆಗಳ ಸಂಖ್ಯೆ | ನೇಮಕಾತಿ ಹೊಂದಲು ಇನ್ನೂ ಬಾಕಿಯಿರುವ ಹುದ್ದೆಗಳು |
|---|---|---|---|---|---|
| 1 | ಅಗ್ನಿಶಾಮಕ ಠಾಣಾಧಿಕಾರಿ | 36 | 36 | ಮಾನ್ಯ KSAT ಆದೇಶದಂತೆ ನೇಮಕಾತಿ ಮಾಡಬೇಕಾದ 2015-16 ನೇ ಸಾಲಿನ ಬಾಕಿ ಹುದ್ದೆಗಳು- **03** | -- |
| 2 | ಚಾಲಕ ತಂತ್ರಜ್ಞ | 82 | 65 | 03 | 14 |
| 3 | ಅಗ್ನಿಶಾಮಕ ಚಾಲಕ | 227 | 211 | 05 | 11 |
| 4 | ಅಗ್ನಿಶಾಮಕ | 1222 | 1170 | -- | 52 |
| ಒಟ್ಟು | | **1567** | **1482** | **(8+3)=11** | **77** |

...3.

Text



ಪ್ರಸ್ತುತ ಇಲಾಖೆಯಲ್ಲಿ ಖಾಲಿಯಿರುವ ವೃಂದವಾರು ನೇರ ನೇಮಕಾತಿ ಹುದ್ದೆಗಳ ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ | ಹುದ್ದೆಗಳ ವೃಂದ | ವಯೋನಿವೃತ್ತಿ, ಪದೋನ್ನತಿ ಮತ್ತು ಇತರೆ ಕಾರಣಗಳಿಂದ ಉಂಟಾದ ರಿಕ್ತಸ್ಥಾನಗಳು ಸಂಖ್ಯೆ | 2020ನೇ ಸಾಲಿನ ನೇಮಕಾತಿಯಲ್ಲಿ ನೇಮಕಾತಿ ಹೊಂದದ ರಿಕ್ತಸ್ಥಾನಗಳ ಸಂಖ್ಯೆ | ಪ್ರಸ್ತುತ ಇಲಾಖೆಯಲ್ಲಿ ಖಾಲಿಯಿರುವ ಒಟ್ಟು ಹುದ್ದೆಗಳ ಸಂಖ್ಯೆ |
|---|---|---|---|---|
| 1 | 2 | 3 | 4 | 5 |
| 1 | ಅಗ್ನಿಶಾಮಕ ಠಾಣಾಧಿಕಾರಿ | 64 | -- | 64 |
| 2 | ಚಾಲಕ ತಂತ್ರಜ್ಞ | 13 | 14 | 27 |
| 3 | ಅಗ್ನಿಶಾಮಕ ಚಾಲಕ | 142 | 11 | 153 |
| 4 | ಅಗ್ನಿಶಾಮಕ | 679 | 52 | 731 |
| ಒಟ್ಟು | | **898** | **77** | **975** |

ಇಲಾಖೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳ ವಯೋನಿವೃತ್ತಿ, ಮರಣ ಹೊಂದಿರುವ ಮತ್ತು 2020ನೇ ಸಾಲಿನ ನೇಮಕಾತಿಯಲ್ಲಿ ನೇಮಕಾತಿ ಹೊಂದದೇ ಉಳಿದ ರಿಕ್ತಸ್ಥಾನಗಳು ಹಾಗೂ ಇನ್ನಿತರೆ ಕಾರಣದಿಂದ ಖಾಲಿಯಾದ ಹುದ್ದೆಗಳು ಮತ್ತು ಹೊಸದಾಗಿ ಪ್ರಾರಂಭಗೊಂಡ ಅಗ್ನಿಶಾಮಕ ಠಾಣೆಗಳಿಗೆ ಸೃಜಿಸಲಾದ ಹುದ್ದೆಗಳಿಗೆ ಅಧಿಕಾರಿ ಮತ್ತು ಸಿಬ್ಬಂದಿಯವರ ಕೊರತೆ ಉಂಟಾಗಿರುತ್ತವೆ. ಪ್ರಸ್ತುತ ಇಲಾಖೆಯಲ್ಲಿ 2024ರ ಮಾರ್ಚ್ ತಿಂಗಳ ಅಂತ್ಯಕ್ಕೆ ವಿವಿಧ ವೃಂದದ ಒಟ್ಟು 975 ನೇರ ನೇಮಕಾತಿ ಹುದ್ದೆಗಳು ಖಾಲಿ ಇದ್ದು, ಈ ಖಾಲಿ ಹುದ್ದೆಗಳನ್ನು ಭರ್ತಿಮಾಡುವುದು ಅತ್ಯವಶ್ಯಕವಾಗಿರುತ್ತದೆ.

ಆದ್ದರಿಂದ ಉಲ್ಲೇಖ(1)ರ ಸರ್ಕಾರದ ಅಧಿಸೂಚನೆಯಲ್ಲಿ ಅಧಿಸೂಚಿಸಿರುವಂತೆ ಪ್ರಸ್ತುತ ಇಲಾಖೆಯಲ್ಲಿ ಖಾಲಿಯಿರುವ 975 ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡುವಂತೆ ಈ ಮೂಲಕ ಕೋರಿದೆ.

ಡಿ.ಜಿ.ಪಿ. ಮತ್ತು ಡಿ.ಜಿ.ರವರಿಂದ
ಕರಡು ಅನುಮೋದಿಸಲ್ಪಟ್ಟಿದೆ.

ತಮ್ಮ ವಿಶ್ವಾಸಿ

19/4/24

(ಟಿ.ಎನ್ ಶಿವಶಂಕರ)
ನಿರ್ದೇಶಕರು,
ಪೊಲೀಸ್ ಮಹಾ ನಿರ್ದೇಶಕರು
ಹಾಗೂ ಮಹಾ ನಿರ್ದೇಶಕರು
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು.
ರವರ ಪರವಾಗಿ.